# DAKSHINA KARNATAKA SUNNI CENTRE (R)
# MANGALURU

www.dksconline.com

# DAKSHINA KARNATAKA SUNNI CENTRE(R) MANGALURU



Dakshina Karnataka Sunni Centre is an organization established about 27 years ago with a strong ambition of serving the community by helping the needy people. It has grown into a leading organization in Karnataka with a subsidiary institute called Markaz Ta'alimil Ihsan at Mooloor in Udupi district. Assayed K. S. Atakoya Thangal Kumbol, who is a spiritual leader of South India and who leads many associations in the state is the chief patron of the organization.

Started with few students, the institution has grown up to include more than 2 thousand students who are getting quality education in many departments. like Orphanage, Islamic Da'awa College, Residential School, Hifz, Darul Masakeen, English Medium School, Women's PU College, Science and Arts College, Nursery School, Zahratul Qur'an and Women's Shariath are functioning and more than 200 staff are serving. It has led a revolution in the religious, social and educational fields with great courage and today it has grown into a great institution with more than 2400 students acquiring knowledge. The organization's journey so far is short and still has a long way to go. Many dreams lie ahead for the organization. We always look forward to your sincere prayers and help and cooperation in order for all these to become realized.

ಮರ್ಕಝ್ ತಲಿಮಿಲ್ ಇನ್ಸಾನ್ ಅದು ತಾಯ್ನಾಡಿನ ಬಡ ನಿರ್ಗತಿಕ ಜನರಿಗೆ ಸಹಾಯು ಮಾಡುವ ಮೂಲಕ ಸಾಮುದಾಯದ ಸೇವೆಯನ್ನು ಮಾಡುವ ದೃಢ ಸಂಕಲ್ಪವನ್ನು ಮುಂದಿಟ್ಟುಕೊಂಡು ಸುಮಾರು 27 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟ ಸಂಸ್ಥೆ ದಕ್ಷಿಣ ಕರ್ನಾಟಕ ಸುನ್ನೀ ಸೆಂಟರ್, ನಂತರ ಎರಡು ವರ್ಷ ಕಳೆದಾಗ ಉಡುಪಿ ಜಿಲ್ಲೆಯ ಎಂಬ ಅಧೀನ ಸಂಸ್ಥೆಯನ್ನು ಮೂಳೂರಿನಲ್ಲಿ ಮರ್ಕಝ್ ತಅಲೀಮಿಲ್ ಇನ್ಸಾನ್ ಈಗ ಅದು ಪ್ರಾರಂಭಿಸಿತು. ಕರ್ನಾಟಕದಲ್ಲಿಯೇ ಸಮನ್ವಯ ಶಿಕ್ಷಣದಲ್ಲಿ ರಾಜ್ಯದಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಯಾಗಿ ಬೆಳೆದಿದೆ. ದಕ್ಷಿಣ ಭಾರತದ ಆಧ್ಯಾತ್ಮಿಕ ನಾಯಕರೂ, ಹಲವು ಸಂಘ ಸಂಸ್ಥೆಗಳಿಗೆ ನಾಯಕತ್ವ ನೀಡುವ ಅಸ್ಸಯ್ಯದ್ ಕೆ.ಎಸ್.ಆಟಕೋಯ ತಂಗಳ್ ಕುಂಬೋಳ್ ಈ ಸಂಸ್ಥೆಯ ಸಾರಥಿಯಾಗಿದ್ದಾರೆ.

ಆರಂಭದಲ್ಲಿ ಬೆರಳೆಣಿಕೆಯ ವಿದ್ಯಾರ್ಥಿಗಳಿಂದ ಆರಂಭಗೊಂಡ ಸಂಸ್ಥೆಯಲ್ಲಿ ಹಲವು ವಿಭಾಗಗಳಿಂದ ಇಂದು 2 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಅನಾಥಾಲಯ, ಇಸ್ಲಾಮಿಕ್ ದಅವಾ ಕಾಲೇಜು, ರೆಸಿಡೆನ್ಸಿಯಲ್ ಸ್ಕೂಲ್, ಹಿಫ್ಝ್, ದಾರುಲ್ ಮಸಾಕೀನ್, ಇಂಗ್ಲೀಷ್ ಮೀಡಿಯಂ ಸ್ಕೂಲ್, ಮಹಿಳಾ ಪಿ ಯು ಕಾಲೇಜು, ಸೈನ್ಸ್ ಮತ್ತು ಆರ್ಟ್ಸ್ ಕಾಲೇಜು, ನರ್ಸರಿ ಸ್ಕೂಲ್, ಝುಹ್ಮತುಲ್ ಖುರ್‌ಆನ್ ಮತ್ತು ಮಹಿಳಾ ಶರೀಅತ್ ಮೊದಲಾದ ವಿಭಾಗಗಳು ಕಾರ್ಯಾಚರಿಸುತ್ತಿದ್ದು 200ಕ್ಕೂ ಅಧಿಕ ಸಿಬ್ಬಂಧಿಗಳು ಸೇವೆಗೈಯ್ಯುತ್ತಿದ್ದಾರೆ. ಧಾರ್ಮಿಕ ಸಾಮಾಜಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿ ಕ್ರಾಂತಿಯನ್ನು ಎಬ್ಬಿಸುತ್ತಾ ಉನ್ನತ ಧೈಯದೊಂದಿಗೆ ಮುನ್ನುಗ್ಗಿ ಇಂದು 2400ಕ್ಕಿಂತಲೂ ಅಧಿಕ ವಿದ್ಯಾರ್ಥಿಗಳು ಜ್ಞಾನಾರ್ಜನೆಗೈಯುತ್ತಿರುವ ಮಹಾ ಹೆಮ್ಮರವಾಗಿ ಬೆಳೆದಿದೆ. ಸಂಸ್ಥೆಯ ಈವರೆಗಿನ ಪ್ರಯಾಣ ತುಂಬಾ ಚಿಕ್ಕದಾಗಿದ್ದು ಇನ್ನೂ ಬಹು ದೂರ ಸಾಗಬೇಕಾಗಿದೆ. ಹಲವಾರು ಕನಸುಗಳು ಸಂಸ್ಥೆಯ ಮುಂದಿದೆ. ಇದೆಲ್ಲವನ್ನೂ ನನಸು ಮಾಡಲು ತಮ್ಮ ನಿಷ್ಕಳಂಕ ದುಆ ಹಾಗೂ ಸಹಾಯ ಸಹಕಾರವನ್ನು ಸದಾ ನಿರೀಕ್ಷಿಸುತ್ತೇವೆ.



# ಇಹ್ಸಾನ್ ಎಜು ಪ್ಲಾನೆಟ್ (ದಅ್‌ವಾ)

# IHSAN EDU PLANET

ಇಸ್ಲಾಮಿನ ದಅ್‌ವಾ ರಂಗದಲ್ಲಿ ಪ್ರಗಲ್ಭರಾದ ಯುವ ವಿದ್ವಾಂಸರನ್ನು ಸಮಾಜಕ್ಕೆ ಅರ್ಪಿಸುವುದೇ ಪ್ರಮುಖ ಉದ್ದೇಶ. ದೀನೀ ವಿದ್ಯಾಭ್ಯಾಸದೊಂದಿಗೆ ಲೌಕಿಕ ವಿದ್ಯಾಭ್ಯಾಸವನ್ನು ಪಿ.ಜಿ ಹಾಗೂ ದೀನೀ ವಿದ್ಯಾಭ್ಯಾಸದಲ್ಲಿ ಮುತ್ವವ್ವಲ್‌ವರೆಗೆ ನೀಡುವ ಕೋರ್ಸ್.. ಎಸ್.ಎಸ್.ಎಲ್.ಸಿ.ಯಲ್ಲಿ ಉನ್ನತ ಅಂಕ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ. ಡಿಗ್ರಿಯ ನಂತರ ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಮುಂದುವರಿಯಲು ಅವಕಾಶ ಹಾಗೂ ನಾಗರಿಕ ಸೇವೆಗಳಂತಹ ಉನ್ನತ ಸರಕಾರಿ ಹುದ್ದೆಗಳ ಸಹಿತ ಅಭಿರುಚಿಗೆ ತಕ್ಕಂತೆ ವಿಶೇಷ ತರಬೇತಿ. ಕೇಂದ್ರ ಸರಕಾರ ಅಂಗೀಕರಿಸಿದ ಡಿಪ್ಲೊಮಾ ಇನ್ ಅರೇಬಿಕ್ ಮತ್ತು ಡಿಪ್ಲೊಮಾ ಇನ್ ಉರ್ದುಗಳ ಸರ್ಟಿಫಿಕೇಟ್. ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಅನಾವರಣಗೊಳಿಸಿ ಅವರ ಸರ್ವತೋಮುಖ ಅಭಿವೃದ್ಧಿಗೆ ಬೇಕಾದ ಸರ್ವ ವ್ಯವಸ್ಥೆಗಳು. ತರಬೇತಿ ಹೊಂದಿದ ನಿಪುಣರಾದ ಅಧ್ಯಾಪಕ ವೃಂದ. ಒಟ್ಟು ಏಳು ಬ್ಯಾಚುಗಳಲ್ಲಿ 175 ವಿದ್ಯಾರ್ಥಿಗಳಾಗಿದೆ ಗುರಿ.

The main aim is to give young scholars who have expertise in Islamic propagator field to the society. The course includes religious studies till mukhthasar and material studies till PG. Admissions are only for those who secured good grade in SSLC. Also facilitates special guidance in civil service examination and in other interested fields after their bachelor's. Provides certificate of diploma in arabic and urdu to unwrap the hidden talents in students and all support for their career developments. Supervision of this section is undertaken by the fully trained expert teaching staffs.






# ಅಲ್ ಇಹ್ಸಾನ್ ಹಿಫ್ಳುಲ್ ಕುರ್‌ಆನ್ ಕಾಲೇಜು.

ಕುರ್‌ಅನ್ ನಮ್ಮ ಪವಿತ್ರ ಗ್ರಂಥ. ಜೀವಂತ ಮುಅ್‌ಜಿಝತ್. ಅದನ್ನು ಅಲ್ಲಾಹು ಅಂತ್ಯ ದಿನದವರೆಗೆ ರಕ್ಷಿಸುವುದು ಕುರ್‌ಆನ್ ಕಂಠಪಾಠ ಮಾಡುವ ಉದ್ದೇಶಕ್ಕೆ ಮಾತ್ರವಾಗಿ ಸ್ಥಾಪಿತವಾದ ವಿಭಾಗವಾಗಿದೆ. ಹಿಫ್ಝ್‌ಲ್ ಕುರ್‌ಆನ್ ವಿಭಾಗ. ಈ ವಿಭಾಗದಲ್ಲಿ ಕುರ್‌ಆನ್ ಸಂಪೂರ್ಣವಾಗಿ ಕಂಠಪಾಠ ಮಾಡುವುದರೊಂದಿಗೆ ಹಲವು ರೀತಿಯಲ್ಲಿ ಕುರ್‌ಆನ್ ಪಠಣಾ ತರಬೇತಿ. ಸ್ಕೂಲ್ ಆರನೇ ತರಗತಿಗೆ ಪ್ರವೇಶ. ಅಗತ್ಯವಾದ ಕರ್ಮಶಾಸ್ತ್ರ ಜ್ಞಾನದೊಂದಿಗೆ ವಿದ್ಯಾರ್ಥಿಗಳ ಪ್ರತಿಭಾ ಪೋಷಣೆಗೂ ಅವಕಾಶ. ಮುಂದಿನ ವಿದ್ಯಾಭ್ಯಾಸಕ್ಕೂ ವ್ಯವಸ್ಥೆ.

# HIFZUL QUR-AN COLLEGE

QUR-AN is our holy book. It's a living miracle. Almighty Allah himself will protect it until the doomsday. With the only intention to byheart this holy book, the section of hifzul qur-an was started. In this section along with byhearting the complete qur-an, different types of qur-an reciting methods are also practiced. Admissions are only for 6th std students. Along with, necessary fiqh knowledge, chance to Improve student's Talents. Facilities for higher educations also.








# DARUL MASAKEEN

Lot of children in our community who are living without their parents, but their parents are still existing. It is a biggest loss for our society where the genius kids of helpless family are thrown out without help. Bu forecasting the future of this kids AL IHSAN DESTITUTE was started successfully. we provide education food and accommodation as same as the children who study by paying fees. Focusing to achieve high position in the society is the main aim.

# ದಾರುಲ್ ಮಸಾಕೀನ್

ತಂದೆ ಜೀವಿಸಿದ್ದಾರೆ, ಅದರೆ ಮಕ್ಕಳನ್ನು ಬಿಟ್ಟು ಬೇರೆಯಾಗಿದಾರೆ. ಮಕ್ಕಳು ತಂದೆ ಇದ್ದೂ ಯತೀಂಗಳಂತಾಗಿದ್ದಾರೆ. ರಕ್ಷಕರೂ ಮಾರ್ಗದರ್ಶಕರೂ ಇಲ್ಲದ ಅದರೆ ಇವರ ಗತಿಯೇನು? ಹಲವಾರು ಸಮಸ್ಯೆಗಳಿಂದ ಸಿಕ್ಕಿ ಬಳಲಿದ ಅನೇಕ ನಿಸ್ಸಹಾಯಕ ಕುಟುಂಬದ ಪ್ರತಿಬಾನ್ವಿತ ವಿಧ್ಯಾರ್ಥಿಗಳು ಅಲ್ಲಿಯೇ ಬಾಡಿ ಹೋಗುತ್ತಿರುವಾಗ ಅದು ಸಮುದಾಯಕ್ಕೆ ಅತೀ ದೊಡ್ಡ ನಷ್ಟವೇ ಸರಿ. ಇದನ್ನು ಮನಗಂಡು ಆ.ಏ.ಖ.ಅ ದಾರುಲ್ ಮಸಾಕೀನ್ ಪ್ರಾರಂಭಿಸಿದೆ. ಇಲ್ಲಿ ಶ್ರೀಮಂತ ಮಕ್ಕಳಂತೆ ಯಾವುದೇ ಕೊರತೆ ಇಲ್ಲದೆ ಸರ್ವವಿಧ ಸೌಕರ್ಯಗಳನ್ನು ಈ ಮಕ್ಕಳು ಉಚಿತವಾಗಿ ತಮಗೆ ಅರ್ಹವಾದ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ. ಅವರನ್ನು ಸಮಾಜದಲ್ಲಿ ಉನ್ನತ ಮಟ್ಟಕ್ಕೆ ತಲುಪಿಸುವುದೇ ಸಂಸ್ಥೆಯ ಗುರಿ.

---

# ಅಲ್ ಇಹ್ಸಾನ್ ಯತೀಂ ಖಾನ (ಅನಾಥಾಲಯ)

ಪಿತೃವಾತ್ಸಲ್ಯದ ಅಮೂಲ್ಯ ಕ್ಷಣಗಳ ಭಾಗ್ಯವನ್ನು ಕಳೆದು ಕೊಂಡ ಅನಾಥ ಮಕ್ಕಳ ಸಂರಕ್ಷಣೆಯ ಹೊಣೆ ಹೊತ್ತು ಪ್ರಾರಂಭಿಸಿದ ಅಲ್ ಇಹ್ಸಾನ್ ಅನಾಥಾಲಯ. ಅವರ ಊಟ, ವಸತಿ, ವೈದ್ಯಕೀಯ, ಸ್ಕೂಲ್, ಮದ್ರಸಾ ಹಾಗೂ ಇನ್ನಿತರ ಎಲ್ಲಾ ಖರ್ಚುಗಳನ್ನು ಸಂಸ್ಥೆಯು ವಹಿಸಿ ಕೊಂಡು ನಿರ್ವಹಿಸುತ್ತಿದೆ. ಮನೆಯ ವಾತಾವರಣ, ಉತ್ತಮ ವಿದ್ಯಾಭ್ಯಾಸ, ಭವಿಷ್ಯದ ಕುರಿತು ಚಿಂತನೆಗೀಡುಮಾಡುವ ತರಗತಿಗಳು, ಪ್ರತಿಭಾ ಪುರಸ್ಕಾರ, ಅವರ ಅಭಿರುಚಿಗೆ ತಕ್ಕಂತೆ ಮುನ್ನಡೆಯಲು ತರಬೇತಿ ಮುಂತಾದ ಹಲವು ವೈಶಿಷ್ಟ್ಯಗಳು. ಇದರೊಂದಿಗೆ ನಮ್ಮ ಅಲ್ ಇಹ್ಸಾನ್ ಸ್ಕೂಲಿನಲ್ಲಿ ಈ ಪರಿಸರದ ಸುಮಾರು 100ರಷ್ಟು ಯತೀಂ ವಿದ್ಯಾರ್ಥಿ ವಿದ್ಯಾರ್ಥಿನಿಗಳು ಕಲಿಯುತ್ತಿದ್ದು ಅವರ ಸರ್ವ ವೆಚ್ಚಗಳನ್ನು ಸಂಸ್ಥೆ ಭರಿಸುತ್ತಿದೆ. ಇದರಿಂದ ಅವರ ತಾಯಿಯ ಪಕ್ಕದಲ್ಲಿಯೇ ಅವರಿಗೆ ಉಚಿತ ವಿದ್ಯಾಭ್ಯಾಸ ಪಡೆಯಲು ಸಹಕಾರವಾಗುತ್ತದೆ.

# AL IHSAN YATHEEM KHANA

With the responsibility to protect the childrens who lost a part of fruitful time of father's love, AL IHSAN ORPHANAGE was started. From passed a many years, institution itself is spending for their food& accommodation, medical, school, madrasa and other expenses. Providing basic needs in hygienic atmosphere, career guidance classes, talent prices, also promoting them to Civil service exams.









## ಬೋರ್ಡಿಂಗ್ ಸ್ಕೂಲ್

## BOARDING SCHOOL

ತಮ್ಮ ಮಕ್ಕಳ ಆಗು–ಹೋಗುಗಳನ್ನು ಸಾಕಷ್ಟು ಗಮನಿಸಲು ಸಾಧ್ಯವಿಲ್ಲದ ಶ್ರೀಮಂತ ಮತ್ತು ಮಧ್ಯಮ ವರ್ಗದ ಮಕ್ಕಳ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಕೊಂಡು ಉಭಯ ವಿದ್ಯಾಭ್ಯಾಸವನ್ನು ನೀಡುವ ವಿಭಾಗವಿದು. ತಾವು ಒಂದು ನಿಗದಿತ ಶುಲ್ಕವನ್ನು ಪಾವತಿಸಿದರೆ ಆ ವಿದ್ಯಾರ್ಥಿಯ ಸಂಪೂರ್ಣ ಜವಾಬ್ದಾರಿಯನ್ನು ಸಂಸ್ಥೆಯೇ ನೋಡಿಕೊಳ್ಳುತ್ತದೆ. 4 ನೇ ತರಗತಿಯಿಂದಲೇ ಪ್ರವೇಶ. ಉತ್ತಮ ದೀನೀ ವಿದ್ಯಾಭ್ಯಾಸ, ಟ್ಯೂಷನ್ ವ್ಯವಸ್ಥೆ, ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳು ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ವಾತಾವರಣ ಮತ್ತು ವ್ಯವಸ್ಥೆಗಳು. ದೈನಂದಿನ ಕಾರ್ಯಗಳ ಪ್ರಾಯೋಗಿಕ ತರಬೇತಿ ಮುಂತಾದ ವೈಶಿಷ್ಟ್ಯಗಳು, ಪ್ರತಿ ವರ್ಷ ಎಸ್.ಎಸ್.ಎಲ್.ಸಿ ಯಲ್ಲಿ 100 ಫಲಿತಾಂಶ.

We will take complete care of the childrens where the parents are uncapable to manage them. This is a special section with quality education of both spiritual and material. Fees are reasonable.

# ಅಲ್ ಇಹ್ಸಾನ್ ಇಂಗ್ಲೀಷ್ ಮೀಡಿಯಂ ಸ್ಕೂಲ್

ದೀನೀ ವಿದ್ಯಾಭ್ಯಾಸದೊಂದಿಗೆ ಇಸ್ಲಾಮಿಕ್ ವಾತಾವರಣದಲ್ಲಿ ಕೆ.ಜಿ ಯಿಂದ ಸೆಕೆಂಡ್ ಡಿಗ್ರಿವರೆಗಿನ ತರಗತಿಗಳು. ಸುಮಾರು 2400ರಷ್ಟು ವಿದ್ಯಾರ್ಥಿಗಳು. ಪ್ರತೀ ವರ್ಷ ಉತ್ತಮ ಫಲಿತಾಂಶ. ಇದೊಂದು ಸಂಸ್ಥೆಯ ಅತಿ ಮುಖ್ಯ ಭಾಗ. ಇಡೀ ಮುಸ್ಲಿಂ ಸಮುದಾಯಕ್ಕೆ ಅದರಲ್ಲೂ ಕರಾವಳಿ ಕರ್ನಾಟಕ ಜನತೆಗೆ ಅಭಿಮಾನವಾದ ಅಲ್–ಇಹ್ಸಾನ್ ಅಕಾಡೆಮಿ ಸ್ಕೂಲ್. ಸುಮಾರು 2400 ವಿಧ್ಯಾರ್ಥಿಗಳು 150 ರಷ್ಟು ಸಿಬ್ಬಂದಿಗಳೂ ಸೇರುವ ಮಹಾಸಮುಚ್ಚಯ. ನೋಡಲು ಸಹಾ ಅತೀ ಸುಂದರವಾಗಿದೆ. ಈ ಶಾಲೆ ಒಂದು ಸಾದಾರಣ ಶಾಲೆಯಂತೆ ಆಗದೆ ಸಂಪೂರ್ಣ ಇಸ್ಲಾಮಿಕ್ ರೀತಿಯಲ್ಲಿ ಕಾರ್ಯಾಚರಿಸುತ್ತಿರುವ ಒಂದು ಮಾದರೀ ಶಾಲೆಯಾಗಿ ಬೆಳಯುತ್ತಿದೆ. ಯತೀಂಗಳಿಗೆ ಸಂಪೂರ್ಣ ಉಚಿತ ಶಿಕ್ಷಣ ಶಾಲೆಯ ವಿಶೇಷತೆಯಾಗಿದೆ.. 8ನೇ ತರಗತಿಯಿಂದ ಗಂಡು ಹೆಣ್ಣು ಬೇರೆ ಬೇರೆಯಾಗಿ ತರಗತಿಳನ್ನು ಬೇರ್ಪಡಿಸಲಾಗಿದೆ. ಪ್ರತಿಯೊಂದು ತರಗತಿಗಳಿಗೂ ಶಾಫಿ, ಹನಫಿ ಬೇರ್ಪಡಿಸಿ ಧಾರ್ಮಿಕ ಶಿಕ್ಷಣ ನೀಡಲಾಗುತ್ತದೆ. ಪರಿಣತಿ, ತರಬೇತಿ ಮತ್ತು  ನೈಪುಣ್ಯತೆ ಹೊಂದಿದ ಗುರುವೃಂದ, ಇಸ್ಲಾಮಿಕ್ ಕರ್ಮಗಳ ಪ್ರಾಕ್ಟಿಕಲ್ ತರಬೇತಿ. ನಿರ್ಭೀತಿಯ ನಿಷ್ಕಮಳ ಕ್ಯಾಂಪಸ್, ಸಂಪೂರ್ಣ ಇಸ್ಲಾಮಿಕ್ ವಸ್ತ್ರಧಾರಣೆ ಗಂಡುಮಕ್ಕಳಿಗೆ ಉತ್ತಮ ಹಾಸ್ಟೆಲ್ ಸೌಖರ್ಯ ಮುಂತಾದವುಗಳು ಇಲ್ಲಿಯ ವಿಶೇಷತೆ.

# AL IHSAN ENGLISH MEDIUM SCHOOL

**Secular and spiritual education from KG to PG are offered with Islamic atmosphere and also securing best results every year. This is the largest institution where 2400 students acquire knowledge with high prosperity especially for Muslim community. It is an outstanding Institution and role model for other schools. We facilitate free education for Orphans, & diversify gender from 8th standard and also provide Islamic education for Shafi and Hanafi students with qualified teachers. Uniform and design in Islamic mode.**



